ಈ) ಈ ಮೂರು ತಿಂಗಳಲ್ಲಿ ಪ್ರತಿಯೊಂದು ಬಸ್‌ನಲ್ಲಿ ಎಷ್ಟು ಅಧಿಕ ಪ್ರಯಾಣಿಕರನ್ನು ತೆಗೆದುಕೊಂಡು ಹೋಗಲಾಗಿದೆ? (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್, (ಸಾರಿಗೆ ಸಚಿವರು).—

ಅ) ಬೈಲಹೊಂಗಲ ಡಿಪೋದ ೧೯೯೦ನೇ ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳ ಲಾಭದ ವಿವರ ಈ ಕೆಳಕಂಡಂತಿದೆ.

ಏಪ್ರಿಲ್ ೧೯೯೦	೦.೩೫ ಲಕ್ಷ ರೂ.ಗಳು
ಮೇ ೧೯೯೦	೨.೨೨ ಲಕ್ಷ ರೂ.ಗಳು
ಜೂನ್ ೧೯೯೦	೨.೫೦ ಲಕ್ಷ ರೂ.ಗಳು

ಆ) ಬಸ್ಸಿನ ಕೊರತೆ ಇರುವುದಿಲ್ಲ.

ಇ) ಬೈಲಹೊಂಗಲ ಡಿಪೋದಿಂದ ಪ್ರತಿದಿನ ಸಂಚಾರ ಮಾಡುತ್ತಿರುವ ೬೧ಳ ಟ್ರಿಪ್ಪುಗಳಲ್ಲಿ ಏಪ್ರಿಲ್ ತಿಂಗಳಲ್ಲಿ ೧೧ ಟ್ರಿಪ್ಪುಗಳಲ್ಲಿ ಹಾಗೂ ಮೇ ತಿಂಗಳಿನಲ್ಲಿ ೯ ಟ್ರಿಪ್ಪುಗಳಲ್ಲಿ ಪ್ರತಿದಿನ ನಿಗದಿಗಿಂತ ಸ್ವಲ್ಪ ಹೆಚ್ಚಿನ ಪ್ರಯಾಣಿಕರನ್ನು ಕೊಂಡೊಯ್ಯಲಾಗಿದೆ.

ಈ)

ಕ್ರಮ ಸಂಖ್ಯೆ	ಎಲ್ಲಿಂದ	ಮಾರ್ಗ	ಎಲ್ಲಿಗೆ	ಕೊಂಡೊಯ್ದ ಸರಾಸರಿ ಪ್ರಯಾಣಿಕರು (ನಿಗದಿಗಿಂತ ಹೆಚ್ಚಿಗೆ) ಏಪ್ರಿಲ್ ೧೯೯೦	ಹೆಚ್ಚಿನ ಪ್ರಯಾಣಿಕರು	ಮೇ ೧೯೯೦	ಹೆಚ್ಚಿನ ಪ್ರಯಾಣಿಕರು	ಜೂನ್ ೧೯೯೦
೧.	ಬೈಲಹೊಂಗಲ		ಶಿವಪುರ	೭೪	೧೪	೬೫	೫	೫೫
೨.	,,		ಮಾರ್ಕಟ್ಟಿ	೬೭	೭	೭೦	೧೦	೫೬
೩.	,,		ಹಿಟ್ಟನಗಿ	೬೮	೮	೬೦	—	೨೩
೪.	,,		ಇಂಗಲಗಿ	೭೦	೧೦	೬೯	೯	೩೬
೫.	,,		ಟರೆಮುರಿ	೭೦	೧೦	೬೭	೭	೪೮
೬.	,,		ದೊಡವಾಡ	೬೯	೯	೬೩	೩	೪೦
೭.	,,		ಮಣ್ಣೂರು	೬೮	೮	೬೨	೨	೨೬
೮.	,,		ಬೈಲೂರು	೭೧	೧೧	೬೨	೨	೪೭
೯.	,,		ಚಿವಟಗುಂಡಿ	೭೦	೧೦	೫೯	—	೫೦
೧೦.	,,		ಸುನ್‌ಕುಪ್ಪ	೮೦	೨೦	೭೨	೧೨	೪೩
೧೧.	,,		ಪಕ್ಕೂಂಡ	೭೪	೧೪	೬೩	೩	೩೫

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ

೯೭೯ (೧೩೦೦) ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ).—ಮಾನ್ಯ ಊಜಕನೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಹಕೆ ಯೆಳಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸರ್ಕಾರವು ರಚನೆ ಮಾಡಿದೆಯೇ ?

ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗುವುದು ?

ಇ) ಈ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಮಂಜೂರಾತಿ ಮಾಡಲಾಗುವುದು ?

ಈ) ಬೀದರ್ ಜಿಲ್ಲೆಗೆ ಈ ಕಾರ್ಯಕ್ರಮದನ್ವಯ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು ? (ವಿವರ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಸ್ಥಾಪನೆಯ ವಿಚಾರವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿರುವಾಗಲೇ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ರೂಪಿಸುವ ಯೋಜನೆಗಳನ್ನು ಅನುಮೋದಿಸುವ ಹಾಗೂ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಸಮನ್ವಯ ಹಾಗೂ ಉಸ್ತುವಾರಿಕೆ ವಹಿಸಲು ಸರ್ಕಾರವು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಿದೆ.

ಆ) ಇ) ಮತ್ತು ಈ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ವಿವಿಧ ಜಿಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ವಿಷಯವು ಉನ್ನತ ಮಟ್ಟದ ಸಮಿತಿಯ ತೀವ್ರ ಪರಿಗಣನೆಯಲ್ಲಿದ್ದು ಮಂಜೂರಾತಿಯಾಗಬೇಕಾಗಿದೆ. ಈ ಉನ್ನತ ಮಟ್ಟದ ಸಮಿತಿಯ ಮಂಜೂರಾತಿ ನಂತರವೆ ಈ ಪ್ರಾಜೆಕ್ಟುಗಳ ಕೆಲಸಗಳ ವೆಚ್ಚದ ವಿವರಗಳು ತಿಳಿಯುವುದು.

ಬೀದರ್ ಜಿಲ್ಲೆಯ ನೀರಾವರಿ ಯೋಜನೆಗಳು

೯೮೦ (೧೩೦೧) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೀದರ್ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಬೀದರ್ ಜಿಲ್ಲೆಯಲ್ಲಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಇ) ಬಹಳಷ್ಟು ಏತ ನೀರಾವರಿ ಯೋಜನೆಗಳು ಕೆಟ್ಟುಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ಕೆಟ್ಟು ಹೋದ ಕಾಮಗಾರಿಗಳನ್ನು ಯಾವಾಗ ಸರಿಪಡಿಸಲಾಗುವುದು? (ವಿವರ ಒದಗಿಸುವುದು).

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೪೦.

ಆ) ೧೨.

ಇ) ಒಂದು ಏತ ನೀರಾವರಿ ಯೋಜನೆಯ ಟ್ರಾನ್ಸ್‌ಫಾರ್ಮರ್ ಸುಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈ ಕಾಮಗಾರಿಯ ರಿಪೇರಿ ಕೆಲಸ ಪ್ರಗತಿಯಲ್ಲಿದೆ. ಔರಾದ್ ತಾಲ್ಲೂಕಿನ ನಿಟ್ಟೂರು (ಕೆ) ಬಳಿಯಿರುವ ಏತ ನೀರಾವರಿ ಯೋಜನೆಯ ಟ್ರಾನ್ಸ್ ಫಾರ್ಮರ್ ೧೯೯೦ರ ಮಾರ್ಚ್‌ಯಲ್ಲಿ ಸುಟ್ಟು ಹೋಗಿರುತ್ತದೆ. ಇದನ್ನು ರೂ. ೪೯,೫೦೦ಗಳ ಅಂದಾಜಿನಲ್ಲಿ ದುರಸ್ತಿಪಡಿಸಲಾಗಿದ್ದು, ಇದನ್ನು ಪರೀಕ್ಷಿಸುವ ಕೆಲಸವು ಪ್ರಗತಿಯಲ್ಲಿರುತ್ತದೆ. ಟ್ರಾನ್ಸ್‌ಫಾರ್ಮರ್‌ಚಾರ್ಜಿಂಗ್ ಕೆಲಸವು ನಡೆಯುತ್ತಿದ್ದು ಇದನ್ನು ಶೀಘ್ರವಾಗಿ ಮುಗಿಸಲಾಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಬಸ್ ಘಟಕಗಳು

೯೮೧ (೧೩೨೦ ಎ) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಸ್ ಘಟಕಗಳು ಇರುತ್ತವೆ ? ಒಂದೊಂದು ಬಸ್ ಘಟಕದಿಂದ ಎಷ್ಟು ಬಸ್ಸು ಸಂಚರಿಸುತ್ತಿವೆ ? (ಪೂರ್ಣ ವಿವರ ನೀಡುವುದು)